# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 69(85) |
| ಸದಸ್ಯರ ಹೆಸರು | : | ಶ್ರೀ ಡಾ:ಎಂ.ಜಿ.ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರಸ್ತುತ ರಾಜ್ಯದ ಎಷ್ಟು ನಗರಗಳಲ್ಲಿ ಯೋಜನೆಗಳನ್ನು (Master Plan)ಕಾಲಮಿತಿಯಲ್ಲಿ ಪರಿಷ್ಕರಿಸಲಾಗಿದೆ: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 108 ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆಗಳಿಗೆ (ಬಿಡಿಎ ಮತ್ತು ಬಿಎಂಆರ್‌ಡಿಎ ಹೊರತುಪಡಿಸಿ) ಸರ್ಕಾರದ ಅನುಮೋದನೆ ನೀಡಲಾಗಿದೆ. ವಿಭಾಗವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಸದರಿ 108 ಅನುಮೋದಿತ ಮಹಾಯೋಜನೆಗಳ ಪೈಕಿ 61 ಪರಿಷ್ಕೃತ ಮಹಾಯೋಜನೆಗಳಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ. ವಿಭಾಗವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಆ. | ಅನೇಕ ನಗರಗಳಲ್ಲಿ ಕೃಷಿ ಭೂಮಿಯನ್ನು ವಸತಿ ಭೂಮಿಯಾಗಿ ಪರಿವರ್ತಿಸುವಲ್ಲಿ ಆಗುತ್ತಿರುವ ವಿಳಂಬ ಮತ್ತು ಅದರಲ್ಲಿನ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ಕೃಷಿ ಭೂಮಿಯನ್ನು ವಸತಿ ಮತ್ತು ಇತರೆ ಉದ್ದೇಶಗಳಿಗೆ ಪರಿವರ್ತಿಸುವಲ್ಲಿನ ವಿಳಂಬವನ್ನು ತಡೆಗಟ್ಟಲು ಮತ್ತು ಪ್ರಕ್ರಿಯೆಯನ್ನು ಸರಳೀಕರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br><br>**1. ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ಹೊರಗಿನ ಪ್ರದೇಶಗಳಲ್ಲಿ;**<br><br>• ಸ್ಥಳೀಯ ಯೋಜನಾ ಪ್ರದೇಶದ ಘೋಷಣೆಯಾಗದಿರುವ ಕಡೆಗಳಲ್ಲಿ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಕಂದಾಯ ಇಲಾಖೆಯ 'ಭೂಮಿ' (Bhoomi) ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.<br><br>• ಈ ತಂತ್ರಾಂಶದಲ್ಲಿ ಸಲ್ಲಿಕೆಯಾಗುವ ಅರ್ಜಿಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ನಿಗಧಿತ ಕಾಲಮಿತಿಯೊಳಗೆ ಆನ್ ಲೈನ್ ಮೂಲಕವೇ ತಾಂತ್ರಿಕ ಅಭಿಪ್ರಾಯ |

| | | |
|---|---|---|
| | | (Technical Opinion) ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಕಡತಗಳ ಭೌತಿಕ ಚಲನೆ ಕಡಿಮೆಯಾಗಿ ವಿಳಂಬ ತಪ್ಪುತ್ತಿದೆ.<br><br>**2. ಸ್ಥಳೀಯ ಯೋಜನಾ ಪ್ರದೇಶಗಳ ವ್ಯಾಪ್ತಿಯಲ್ಲಿ**<br><br>• ಮಹಾಯೋಜನೆ (Master Plan) ಅನುಮೋದನೆಯಾಗಿರುವ ಪ್ರದೇಶಗಳಲ್ಲಿ ಭೂ ಉಪಯೋಗಕ್ಕೆ ಅನುಗುಣವಾಗಿ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಸುಲಭಗೊಳಿಸಲು ಕಂದಾಯ ಇಲಾಖೆಯ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.<br><br>• ಇದರನ್ವಯ ಅರ್ಜಿದಾರರು ಕಂದಾಯ ಇಲಾಖೆಗೆ ಅಲೆದಾಡುವುದನ್ನು ತಪ್ಪಿಸಲು ನೇರವಾಗಿ ಸಂಬಂಧಪಟ್ಟ ಯೊಜನಾ ಪ್ರಾಧಿಕಾರದಲ್ಲೇ ಭೂ ಪರಿವರ್ತನೆ ಶುಲ್ಕಗಳನ್ನು ಪಾವತಿಸಿಕೊಂಡು, ವಿನ್ಯಾಸ ನಕ್ಷೆ (Layout Plan) ಅನುಮೋದನೆ ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>• ಈ ಬಗ್ಗೆ ಕಂದಾಯ ಇಲಾಖೆಯು ದಿನಾಂಕ:23.12.2025 ರಂದು ಕಂದಾಯ ಕಾಯ್ದೆಗೆ ನೂತನ ನಿಯಮಾವಳಿಗಳನ್ನು ರಚಿಸಿ ಆದೇಶ ಹೊರಡಿಸಿದೆ. ಈ ಕ್ರಮದಿಂದಾಗಿ ಏಕಗವಾಕ್ಷಿ ಪದ್ಧತಿಯಡಿ ಶೀಘ್ರ ಅನುಮೋದನೆ ದೊರೆಯಲ್ಲಿದ್ದು, ಸಾರ್ವಜನಿಕರಿಗೆ ಅನಗತ್ಯ ವಿಳಂಬ ಮತ್ತು ತಾಂತ್ರಿಕ ತೊಂದರೆಗಳು ನಿವಾರಣೆಯಾಗಲಿದೆ. |
| ಇ. | ನಗರ ಯೋಜನೆ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ರಾಜ ಕಾಲುವೆ ಮತ್ತು ಬಫರ್ ಜೋನ್ ಒತ್ತುವರಿ ತೆರವುಗೊಳಿಸಲು ಸರ್ಕಾರ ಹಾಕಿಕೊಂಡಿರುವ ಗುರಿ ಏನು? | ರಾಜಕಾಲುವೆ ಮತ್ತು ಬಫರ್ ಜೋನ್ (Buffer Zone) ಒತ್ತುವರಿ ತೆರವುಗೊಳಿಸಲು ಕಂದಾಯ ಇಲಾಖೆಯು ಭೂ ಮಾಪನ ನಡೆಸಿ ಒತ್ತುವರಿದಾರರ ವಿರುದ್ಧ ಕ್ರಮ ಕೈಗೊಳ್ಳುತ್ತದೆ.<br><br>ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಈ ಕೆಳಗಿನ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗುತ್ತಿದೆ.<br><br>1. ಮಹಾಯೋಜನೆಗಳಲ್ಲಿ ಗುರುತಿಸುವಿಕೆ: ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಮಹಾಯೋಜನೆಗಳನ್ನು ತಯಾರಿಸುವಾಗ ರಾಜಕಾಲುವೆಗಳು ಮತ್ತು ಅವುಗಳ ಬಫರ್ ಜೋನ್ ಗಳನ್ನು ಸ್ಪಷ್ಟವಾಗಿ ಗುರುತಿಸಲಾಗುತ್ತಿದೆ. |

| | | |
|---|---|---|
| | | 2. ವಿನ್ಯಾಸ ನಕ್ಷೆ ಅನುಮೋದನೆ ಸಮಯದಲ್ಲಿ ಯಾವುದೇ ಹೊಸ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ಸಮಯದಲ್ಲಿ ರಾಜಕಾಲುವೆ ಮತ್ತು ಬಫರ್ ಜೋನ್ ಜಾಗವನ್ನು ಕಡ್ಡಾಯವಾಗಿ ಬಿಟ್ಟಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಅನುಮೋದನೆ ನೀಡಲಾಗುತ್ತದೆ. |

ಕಡತ ಸಂಖ್ಯೆ: ನಅಇ 23 ಬೆಮಪ್ರಾ 2026 (ಇ)

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

**ಅನುಬಂಧ -1**

| ಚಾಲ್ತಿಯಲ್ಲಿರುವ ಮಹಾಯೋಜನೆ ನಗರ/ಪಟ್ಟಣ -108 | | | | | | | |
|---|---|---|---|---|---|---|---|
| **ಕ್ರ.ಸಂ.** | **ನಗರ/ಪಟ್ಟಣ** | **ಕ್ರ.ಸಂ.** | **ನಗರ/ಪಟ್ಟಣ** | **ಕ್ರ.ಸಂ.** | **ನಗರ/ಪಟ್ಟಣ** | **ಕ್ರ.ಸಂ.** | **ನಗರ/ಪಟ್ಟಣ** |
| | **ಬೆಂಗಳೂರು ವಿಭಾಗ** | | **ಬೆಳಗಾವಿ ವಿಭಾಗ** | | **ಕಲಬುರಗಿ ವಿಭಾಗ** | | **ಮೈಸೂರು ವಿಭಾಗ** |
| 1 | ಚಳ್ಳಕೆರೆ | 1 | ಬದಾಮಿ | 1 | ಬಸವಕಲ್ಯಾಣ | 1 | ಚಾಮರಾಜನಗರ-ರಾಮಸಮುದ್ರ |
| 2 | ಚಿತ್ರದುರ್ಗ | 2 | ಬಾಗಲಕೋಟೆ | 2 | ಭಾಲ್ಕಿ | 2 | ಕೊಳ್ಳೇಗಾಲ |
| 3 | ಹಿರಿಯೂರು | 3 | ಗುಳೇದಗುಡ್ಡ | 3 | ಬೀದರ | 3 | ಬಿರೂರು |
| 4 | ಹೊಳಲ್ಕೆರೆ | 4 | ಇಳಕಲ್ | 4 | ಚಿಟಗುಪ್ಪ | 4 | ಚಿಕ್ಕಮಗಳೂರು |
| 5 | ದಾವಣಗೆರೆ-ಹರಿಹರ | 5 | ಜಮಖಂಡಿ | 5 | ಹುಮನಬಾದ | 5 | ಕಡೂರು |
| 6 | ಜಗಳೂರು | 6 | ಮಹಾಲಿಂಗಪುರ | 6 | ಬಳ್ಳಾರಿ | 6 | ತರಿಕೇರೆ |
| 7 | ಹೊನ್ನಾಳಿ | 7 | ಮುಧೋಳ | 7 | ಹೊಸಪೇಟೆ | 7 | ಬಂಟ್ವಾಳ |
| 8 | ಚನ್ನಗಿರಿ | 8 | ರಬನಕವಿ ಬನಹಟ್ಟಿ | 8 | ಕಂಪ್ಲಿ | 8 | ಮಂಗಳೂರು |
| 9 | ಕೋಲಾರ | 9 | ಬೈಲಹೊಂಗಲ | 9 | ಹರಪ್ಪನಹಳ್ಳಿ | 9 | ಪುತ್ತೂರು |
| 10 | ಕೆಜಿಎಫ್ | 10 | ಬೆಳಗಾವಿ | 10 | ಶಿರಗುಪ್ಪ | 10 | ಅರಸೀಕೆರೆ |
| 11 | ಮುಳಬಾಗಿಲು | 11 | ಗೋಕಾಕ್ | 11 | ಹಂಪಿ ವಿಶ್ವ ಪರಂಪರೆ ನಿರ್ವಹಣ ಪ್ರಾಧಿಕಾರ | 11 | ಹಾಸನ |
| 12 | ಮಾಲೂರು | 12 | ನಿಪ್ಪಾಣಿ | 12 | ವಾಡ | 12 | ಹೊಳೆನರಸೀಪುರ |
| 13 | ಚಿಕ್ಕಬಳ್ಳಾಪುರ | 13 | ರಾಮದುರ್ಗಾ | 13 | ಕಲಬುರಗಿ | 13 | ಬೇಲೂರು-ಹಳೇಬೀಡು |
| 14 | ಚಿಂತಾಮಣಿ | 14 | ಸವದತ್ತಿ | 14 | ಸೇಡಂ | 14 | ಚನ್ನರಾಯಪಟ್ಟಣ |
| 15 | ಗೌರಿಬಿದನೂರು | 15 | ವಿಜಯಪುರ | 15 | ವಾಡಿ ಶಹಾಬಾದ್ | 15 | ಮಡಿಕೇರಿ |
| 16 | ಸಾಗರ | 16 | ಮುದ್ದೇಬಿಹಾಳ | 16 | ಯಾದಗಿರಿ | 16 | ವಿರಾಜಪೇಟೆ |
| 17 | ಶಿಕಾರಿಪುರ | 17 | ಸಿಂದಗಿ | 17 | ಶಹಪೂರ | 17 | ಕುಶಾಲನಗರ |
| 18 | ಶಿವಮೊಗ್ಗ-ಭದ್ರಾವತಿ | 18 | ಇಂಡಿ | 18 | ಸುರಪುರ/ಶೂರಾಪುರ | 18 | ಮಳವಳ್ಳಿ |
| 19 | ಮಧುಗಿರಿ | 19 | ಹುಬ್ಬಳ್ಳಿ-ದಾರವಾಡ | 19 | ಗಂಗಾವತಿ | 19 | ಮಂಡ್ಯ |
| 20 | ಶಿರಾ | 20 | ನವಲಗುಂದ | 20 | ಕೊಪ್ಪಳ | 20 | ಹುಣಸೂರು |
| 21 | ತಿಪಟೂರು | 21 | ಗದಗ-ಬೆಟಗೇರಿ | 21 | ಮಾನವಿ | 21 | ಮೈಸೂರು |
| 22 | ತುಮಕೂರು | 22 | ಲಕ್ಷ್ಮೇಶ್ವರ | 22 | ರಾಯಚೂರು | 22 | ಉಡುಪಿ-ಮಲ್ಪೆ |
| 23 | ಪಾವಗಡ | 23 | ನರಗುಂದ | 23 | ಸಿಂಧನೂರು | 23 | ಗುಂಡ್ಲುಪೇಟೆ |
| 24 | ಕುಣಿಗಲ್ | 24 | ಹಾವೇರಿ | 24 | ಔರಾದ | 24 | ನರಸಿಂಹರಾಜಪುರ |
| | | 25 | ರಾಣೆಬೆನ್ನೂರು | | | 25 | ಕೊಪ್ಪ |
| | | 26 | ಸವಣೂರು | | | 26 | ಮೂಡಬಿದ್ರೆ |

| | | | | | | | |
|---|---|---|---|---|---|---|---|
| | | 27 | ಭಟ್ಕಳ | | | | |
| | | 28 | ದಾಂಡೇಲಿ | | | | |
| | | 29 | ಕಾರವಾರ | | | | |
| | | 30 | ಕುಮಟ | | | | |
| | | 31 | ಸಿರಸಿ | | | | |
| | | 32 | ಕೆರೂರು | | | | |
| | | 33 | ಹುನಗುಂದ | | | | |
| | | 34 | ಕಿತ್ತೂರು | | | | |
| | 24 | | 34 | | 24 | | 26 |
| | ಒಟ್ಟು | 108 | | | | | |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ

ಅನುಬಂಧ -2

| ಪರಿಷ್ಕೃತ ಮಹಾಯೋಜನೆ ಅನುಮೋದನೆಯಾಗಿರುವ ನಗರ/ಪಟ್ಟಣ -61 | | | | | | | |
|---|---|---|---|---|---|---|---|
| ಕ್ರ.ಸಂ. | ನಗರ/ಪಟ್ಟಣ | ಕ್ರ.ಸಂ. | ನಗರ/ಪಟ್ಟಣ | ಕ್ರ.ಸಂ. | ನಗರ/ಪಟ್ಟಣ | ಕ್ರ.ಸಂ. | ನಗರ/ಪಟ್ಟಣ |
| | ಬೆಂಗಳೂರು ವಿಭಾಗ | | ಬೆಳಗಾವಿ ವಿಭಾಗ | | ಕಲಬುರಗಿ ವಿಭಾಗ | | ಮೈಸೂರು ವಿಭಾಗ |
| 1 | ಚಿತ್ರದುರ್ಗ | 1 | ಬಾಗಲಕೋಟೆ | 1 | ಬಸವಕಲ್ಯಾಣ | 1 | ಚಾಮರಾಜನಗರ-ರಾಮಸಮುದ್ರ |
| 2 | ಹಿರಿಯೂರು | 2 | ಇಳಕಲ್ | 2 | ಭಾಲ್ಕಿ | 2 | ಚಿಕ್ಕಮಗಳೂರು |
| 3 | ದಾವಣಗೆರೆ-ಹರಿಹರ | 3 | ಜಮಖಂಡಿ | 3 | ಬೀದರ | 3 | ಮಂಗಳೂರು |
| 4 | ಕೋಲಾರ | 4 | ಮಹಾಲಿಂಗಪುರ | 4 | ಚಿಟಗುಪ್ಪ | 4 | ಅರಸೀಕೆರೆ |
| 5 | ಕೆಜಿಎಫ್ | 5 | ಮುಧೋಳ | 5 | ಹುಮನಬಾದ | 5 | ಹಾಸನ |
| 6 | ಚಿಕ್ಕಬಳ್ಳಾಪುರ | 6 | ರಬನಕವಿ ಬನಹಟ್ಟಿ | 6 | ಬಳ್ಳಾರಿ | 6 | ಮಡಿಕೇರಿ |
| 7 | ಚಿಂತಾಮಣಿ | 7 | ಬೈಲಹೊಂಗಲ | 7 | ಹೊಸಪೇಟೆ | 7 | ಮಂಡ್ಯ |
| 8 | ಸಾಗರ | 8 | ಬೆಳಗಾವಿ | 8 | ಹರಪ್ಪನಹಳ್ಳಿ | 8 | ಹುಣಸೂರು |
| 9 | ಶಿಕಾರಿಪುರ | 9 | ನಿಪ್ಪಾಣಿ | 9 | ವಾಡ | 9 | ಮೈಸೂರು |
| 10 | ಶಿವಮೊಗ್ಗ-ಭದ್ರಾವತಿ | 10 | ರಾಮದುರ್ಗಾ | 10 | ಕಲಬುರಗಿ | | |
| 11 | ಶಿರಾ | 11 | ಸವದತ್ತಿ | 11 | ವಾಡಿ ಶಹಾಬಾದ್ | | |
| 12 | ತಿಪಟೂರು | 12 | ವಿಜಯಪುರ | 12 | ಯಾದಗಿರಿ | | |
| 13 | ತುಮಕೂರು | 13 | ಸಿಂದಗಿ | 13 | ಗಂಗಾವತಿ | | |
| | | 14 | ಹುಬ್ಬಳ್ಳಿ-ದಾರವಾಡ | 14 | ಕೊಪ್ಪಳ | | |
| | | 15 | ಗದಗ-ಬೆಟಗೇರಿ | 15 | ರಾಯಚೂರು | | |
| | | 16 | ಲಕ್ಷ್ಮೇಶ್ವರ | 16 | ಸಿಂಧನೂರು | | |
| | | 17 | ನರಗುಂದ | | | | |
| | | 18 | ಹಾವೇರಿ | | | | |
| | | 19 | ರಾಣೆಬೆನ್ನೂರು | | | | |
| | | 20 | ಸವಣೂರು | | | | |
| | | 21 | ದಾಂಡೇಲಿ | | | | |
| | | 22 | ಕಾರವಾರ | | | | |
| | | 23 | ಸಿರಸಿ | | | | |
| | **13** | | **23** | | **16** | | **9** |
| | **ಒಟ್ಟು** | **61** | | | | | |

22/01/24

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ